ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1394
2 ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3 ಉತ್ತರಿಸುವ ದಿನಾಂಕ : 23.09.2021
4 ಉತ್ತರಿಸುವ ಸಚಿವರು : ಗೃಹ ಸಚಿವರು

ಪ್ರ. ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿರುವ ಒಟ್ಟು ನಾನ್ ಐ.ಪಿ.ಎಸ್. ಎಸ್.ಪಿ.. ಹುದ್ದೆಗಳ ಸಂಖ್ಯೆ ಎಷ್ಟು;	ಎಸ್.ಪಿ. (ಸಿವಿಲ್) (ನಾನ್ ಐಪಿಎಸ್) ಹುದ್ದೆಗಳ ಸಂಖ್ಯೆ-109
ಆ	ಸದರಿ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳು ಭರ್ತಿಯಾಗಿದೆ; ಎಷ್ಟು ಹುದ್ದೆಗಳು ಖಾಲಿ ಇವೆ;	107 ಹುದ್ದೆಗಳು ಭರ್ತಿಯಾಗಿದ್ದು, 02 ಹುದ್ದೆಗಳು ಖಾಲಿ ಇರುತ್ತದೆ
ಇ	ಸದರಿ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳನ್ನು ಐ.ಪಿ.ಎಸ್. ರವರಿಗೆ ನೀಡಲಾಗಿದೆ; ಕಾರಣಗಳೇನು;	ಎಸ್.ಪಿ. (ಸಿವಿಲ್) (ನಾನ್ ಐಪಿಎಸ್) 22 ಹುದ್ದೆಗಳ ಎದುರಿಗೆ ಐ.ಪಿ.ಎಸ್. ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಎಸ್.ಪಿ. ಐಪಿಎಸ್ ವೃಂದದ ಮಂಜೂರಾತಿ ಬಲ 57 ಇದ್ದು, ಪ್ರಸ್ತುತ ರಾಜ್ಯದಲ್ಲಿ ಎಸ್.ಪಿ. ಐಪಿಎಸ್ ವೃಂದದ 90 ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಇವರುಗಳಿಗೆ ಸ್ಥಾನ ಕಲ್ಪಿಸಲು ಎಸ್.ಪಿ. (ಸಿವಿಲ್) (ನಾನ್ ಐಪಿಎಸ್) ಹುದ್ದೆಗಳು ಹಾಗೂ ಇತರೆ ನಿಯೋಜನೆ ಹುದ್ದೆಗಳಲ್ಲಿ ಸ್ಥಳ ನಿಯುಕ್ತಿಗೊಳಿಸಲಾಗಿದೆ.
ಈ	2002ರ ಬ್ಯಾಚಿನ ಡಿ.ಎಸ್.ಐ. (ಡಿಟೆಕ್ಟೀವ್ ಸಬ್ ಇನ್ಸ್‌ಪೆಕ್ಟರ್) ರವರಿಗೆ 2020ರಲ್ಲಿ ಸಿ ಅಂಡ್ ಆರ್ ರೂಲ್ಸ್ ಬದಲಾವಣೆ ಮಾಡಿ ಬೇರೆ ಬೇರೆ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗಮನಕ್ಕೆ ಬಂದಿರುತ್ತದೆ
ಉ	ಇದರಿಂದಾಗಿ ಸೇವಾ ಹಿರಿತನದ ಅಧಿಕಾರಿಗಳು, ತನಗಿಂತ ವಯಸ್ಸಿನಲ್ಲಿ ಮತ್ತು ಸೇವೆಯಲ್ಲಿ ಕಿರಿಯರಾದ ಅಧಿಕಾರಿಗಳ ಕೈಕೆಳಗೆ ಕೆಲಸ ನಿರ್ವಹಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗಮನಕ್ಕೆ ಬಂದಿರುವುದಿಲ್ಲ
ಊ	ಹಾಗಿದ್ದಲ್ಲಿ, ಈ ತಾರತಮ್ಯವನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ಅನ್ವಯಿಸುವುದಿಲ್ಲ

ಸಂಖ್ಯೆ: ಒಇ 231 ಪಿಇಜಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು